



## ವೀಕ್ಷಕರ ಝಲಕ್

ನಿಮ್ಮ ಅಕ್ಕ ತಂಗಿಯರ ಸಂಸಾರ ಹಾಳು ಮಾಡಬೇಕಾ? ಕಲರ್ಸ್ ಕನ್ನಡದಲ್ಲಿ 'ಅಕ್ಕ' ಧಾರಾವಾಹಿಯಿಂದ ಸ್ಫೂರ್ತಿ ಪಡೆಯಿರಿ. ನಿಮ್ಮ ದತ್ತು ಮಗಳ ಸಂಸಾರ ಹಾಳು ಮಾಡುವ ದುರಾಲೋಚನೆ ಇದೆಯೇ? ಸುವರ್ಣದ 'ಅಮೃತ ವರ್ಷಿಣಿ' ಕೈಪಿಡಿಯಾಗಬಹುದು. ನಿಮ್ಮ ಸೊಸೆಯನ್ನು ಮನೆ ಬಿಟ್ಟು ಓಡಿಸುವ ಯೋಚನೆಯೇ? ಝೀನ 'ಮಿ. ರಂಗೇಗೌಡ' ದಾರಿ ತೋರಬಹುದು.

ಸ್ನೇಹಿತನ ಸಂಸಾರದಲ್ಲಿ ಹುಳಿ ಹಿಂಡುವ ಯೋಚನೆ ಇದೆಯೇ? ಸುವರ್ಣದಲ್ಲಿ 'ಅವನು ಅತ್ತ ಶ್ರಾವಣಿ' ನೋಡಿ. ನೀವು ಯಾರದಾದರೂ ಜೀವ ತೆಗೆಯಬೇಕೇ? ಕಲರ್ಸ್‌ನ 'ಲಕ್ಷ್ಮಿ ಬಾರಮ್ಮ' ಸ್ಕೆಚ್ ಕೊಡಬಹುದು. ನೀವು ಬಾಲ್ಯದಲ್ಲೊಂದು ಮತ್ತು 25ನೇ ವರ್ಷದಲ್ಲಿ ಇನ್ನೊಂದು ಮದುವೆ ಯಾಗಬೇಕೆಂದು ಯೋಚಿಸಿದ್ದೀರಾ? 'ಪುಟ್ಟ ಗೌರಿ ಮದುವೆ' ನೋಡಿ.

ಮನೆಯಲ್ಲಿಯೇ ಕುಳಿತು ಇಂಗ್ಲಿಷ್ ಕಲಿಯಲು ಅಡುಗೆ ಕಾರ್ಯಕ್ರಮ. ಮಕ್ಕಳಿಗೆ ಹಿಂಸೆ ಕೊಡುವುದನ್ನು ಕಲಿಬೇಕೇ? 'ಚಿನ್ನಾರಿ' ನೋಡಿ ಕಲಿತುಕೊಳ್ಳಿ.

ನಮ್ಮ ವೀಕ್ಷಕರ ಪ್ರಭುದ್ಧತೆಯ ಆಳ ಮತ್ತು ನಮ್ಮ ಟಿವಿ ಚಾನೆಲ್‌ಗಳು ಸಮಾಜಕ್ಕೆ ನೀಡುವ ಸಂದೇಶಗಳನ್ನು ತಿಳಿಯಲು ಅಂತರ್ಜಾಲದಲ್ಲಿ ಹರಿದಾಡುವ ಕನ್ನಡ ಟಿವಿ ವೀಕ್ಷಕರ ಇಂಥಹ ಕಾಮೆಂಟ್ಸ್‌ಗಳು ಸಾಕಲ್ಲವೇ?

ರಮಾನಂದ ಶರ್ಮಾ, ಬೆಂಗಳೂರು

ವಾರದ ಪತ್ರ

## ಲೆಕ್ಕ ತಪ್ಪುವ ಶಿಕ್ಷಿತರು

ರಾತ್ರಿ 9 ಗಂಟೆಗೆ ಚಂದನದಲ್ಲಿ ಡಾ. ನಾ. ಸೋಮೇಶ್ವರರು ನಡೆಸಿಕೊಡುವ ಥಟ್ಟಂತ ಹೇಳಿ ಕಾರ್ಯಕ್ರಮ ಚೆನ್ನಾಗಿದೆ. ದೊಡ್ಡ ದೊಡ್ಡ ಕಲಾವಿದರು, ಸಾಹಿತಿ, ಕವಿ, ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳನ್ನು ಕರೆಸಿ ಅವರ ಕೃತಿಗಳನ್ನು ಪರಿಚಯಿಸುತ್ತಾರೆ. ಇದರಿಂದ ಎಲ್ಲರಿಗೂ ಉಪಯೋಗವಾಗುವುದು. ಸಾಧಾರಣವಾಗಿ ನಿಮ್ಮ ಹವ್ಯಾಸ ಏನು? ಅಂದರೆ ಥಟ್ಟಂತ ಹೇಳಿ ಕಾರ್ಯಕ್ರಮ ನೋಡುವುದು, ಕವಿತೆ ಬರೆಯುವುದು, ಪೇಪರ್ ಓದುವುದು ಅಂತ ಹೇಳುತ್ತಾರೆ. ಆದರೆ ಈ ಲೆಕ್ಕ ಮಾಡಿ ಕೊನೆಗೆ ಮೊತ್ತವನ್ನು ಹೇಳಿ ಎಂದರೆ ಬಹುತೇಕ ಜನರಿಗೆ ಆ ಲೆಕ್ಕ ಬರುವುದಿಲ್ಲ. ತಪ್ಪು ಉತ್ತರ ಹೇಳುತ್ತಾರೆ. ಅವು ಬಾಯಿ ಲೆಕ್ಕಗಳಾಗಿರುತ್ತವೆ. 'ಯಾರೂ ಸರಿಯಾದ ಉತ್ತರ ಕೊಟ್ಟಿಲ್ಲ, ಈ ಪುಸ್ತಕ ನನ್ನಲ್ಲೇ ಉಳಿಯಿತು' ಅಂತಾ ಸೋಮೇಶ್ವರರು ಹೇಳುತ್ತಾರೆ. ಇದು ಆಶ್ಚರ್ಯದ ಸಂಗತಿಯಲ್ಲವೇ? ಶಾಲಾ ಶಿಕ್ಷಕರಾಗಿ, ಥಟ್ಟಂತೆ ಹೇಳಿ ಕಾರ್ಯಕ್ರಮ ನೋಡುವವರಿಗೇ ಇಷ್ಟು ಸಣ್ಣ ಲೆಕ್ಕ ಬರುವುದಿಲ್ಲ ಅಂದರೆ ಏನು ಹೇಳಬೇಕು? ಇದು ಈಗಿನ ಶಿಕ್ಷಣ ಪದ್ಧತಿಯೇ? ಯಂತ್ರಯುಗದ ಮಹಾತ್ಮೆಯೇ?

–ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ್

## ಜಾಹೀರಾತುಗಳ ಹಾವಳಿ

ಇತ್ತೀಚೆಗೆ ಟಿವಿ ಮಾಧ್ಯಮಗಳು ಜಾಹೀರಾತಿನ ಪೆಟ್ಟಿಗೆ ಆಗಿವೆ. ಟಿವಿ ಆನ್ ಮಾಡಿದ್ರೆ ಸಾಕು, ನಮ್ ತಲೆ ತಿನ್ನುವ ಜಾಹೀರಾತುಗಳು ಪ್ರಸಾರವಾಗುತ್ತವೆ. ದಪ್ಪಗಾಗಬೇಕೆ, ಸಣ್ಣಗಾಗಬೇಕೆ, ತಲೆ ಕೂದ್ಲು ಉದುರುತ್ತಾ.. ಹೀಗೆ ತರಾವರಿ ಜಾಹೀರಾತುಗಳು ವೀಕ್ಷಕರ ತಲೆ ತಿನ್ನುತ್ತಿವೆ. ಅರ್ಧ ಗಂಟೆ ಧಾರಾವಾಹಿಯಲ್ಲಿ 15 ನಿಮಿಷ ಜಾಹೀರಾತುಗಳದ್ದೇ ಹಾವಳಿಯಾದ್ರೆ ಇನ್ನು ಟಿವಿಯಲ್ಲಿ ನೋಡುವುದು ಏನಿದೆ?

ಕೆ. ರಮೇಶ್, ಭದ್ರಾವತಿ

## ಅತ್ಯದ್ಭುತ ಡ್ರಾಮಾ

ಝೀ ಕನ್ನಡದಲ್ಲಿ ಪ್ರಸಾರವಾದ (ಜೂನ್ 19) 'ಡ್ರಾಮಾ ಜ್ಯೂನಿಯರ್ಸ್' ನಿಜಕ್ಕೂ ಅತ್ಯದ್ಭುತ. ಅದು ಕಣ್ಣಲ್ಲಿ ನೀರು ತರಿಸಿತು. ಕಿರಿಯರ ಪ್ರೌಢ ಅಭಿನಯ, ತೀರ್ಪುಗಾರರ ಮಾತುಗಳು ಹೃದಯಸ್ಪರ್ಶಿಯಾಗಿದ್ದವು. ಸೈನಿಕರ ಬಗ್ಗೆ, ರಾಷ್ಟ್ರಪ್ರೇಮದ ಬಗ್ಗೆ ಹಗುರವಾಗಿ ಮಾತನಾಡುವವರು ಈ ಕಾರ್ಯಕ್ರಮ ನೋಡಬೇಕು. ಝೀ ಕನ್ನಡದ ಸೈನಿಕರಿಗೆ ಸಲಾಂ.

ಇಶಾ ಆಚಾರ್ಯ ಬಿಲ್ಲೇಶ್ವರ, ಹುಂಚ, ಎಸ್.ಎನ್.ಮಹಾಬಲರಾವ್ ನರಸಿಂಹರಾಜಪುರ, ವಿ.ವಿಜಯೇಂದ್ರ ರಾವ್, ಬೆಂಗಳೂರು

## ಸುಖ ದಾಂಪತ್ಯ

ಚಂದನದಲ್ಲಿ ಪ್ರತಿ ಸೋಮವಾರ ರಾತ್ರಿ 8 ಗಂಟೆಗೆ ಸಂಪ್ರೀತಿ ಸಂಗಾತಿ ಪ್ರಸಾರವಾಗುತ್ತಿದೆ. ಯಶವಂತ ಸರ್‌ದೇಶ್‌ಪಾಂಡೆ ಮತ್ತು ಮಾಲಿನಿ ಸರ್‌ದೇಶ್‌ಪಾಂಡೆ ದಂಪತಿ ಹಾಗೂ ಶಶಿಧರ್ ಕೋಟೆ ಮತ್ತು ಸೀತಾ ಕೋಟೆ ದಂಪತಿ ನಡೆಸಿ ಕೊಡುತ್ತಿರುವ ಈ ಕಾರ್ಯಕ್ರಮದಲ್ಲಿ ಚಲನಚಿತ್ರ ಕಲಾವಿದರ, ನಾಟಕಕಾರರ, ಸಾಹಿತಿಗಳ, ವಿಜ್ಞಾನಿಗಳ, ಸಂಗೀತಗಾರ ದಂಪತಿಗಳ ಸಂದರ್ಶನ ಮಾಡಲಾಗುತ್ತಿದ್ದು, ಚೆನ್ನಾಗಿದೆ.

ಕೆ.ಎಲ್. ಬಾಬು, ಬೀರೂರು

## ಮಹಾಪವಾಡಗಳು!

ಬೆಟ್ಟದ ತುದಿಯಿಂದ ಅತ್ತೆಯ ಅಮೃತಹಸ್ತದಿಂದ ಆಳವಾದ ಬಾವಿಯಲ್ಲಿ ಬಿದ್ದ ನವವಧು, ಅಚ್ಚರಿಯಂತೆ ಮತ್ತೆ ಮದುವೆ ಮಂಟಪದಲ್ಲಿ ವರನ ಎದುರಿನಲ್ಲಿ ಬಂದು ನಿಲ್ಲುತ್ತಾಳೆ! ಅದೇ ಅತ್ತೆಯ ಮುಂದೆ! ಅವಳಿಗೆ ಗಾಯವಾಗಿರುವುದಿಲ್ಲ. ನೀರಿನಲ್ಲಿ ಬಿದ್ದರೂ ಸೀರೆ ಒದ್ದೆಯಾಗಿರುವುದಿಲ್ಲ. ಹಣೆಯ ಕುಂಕುಮಕ್ಕೆ, ತಲೆಯ ಕೂದಲಿಗೆ ನೀರು ಹತ್ತಿದಂತೆ ಕಾಣಿಸದಿದ್ದುದು ಪವಾಡವಲ್ಲವೆ? ಇವೆಲ್ಲ 'ಓಂ ಶಾಂತಿ' ಧಾರಾವಾಹಿಯ ತುಣುಕುಗಳು.

ಹಿರಣ್ಯ ಕಶ್ಯಪುವಿನ ಆಜ್ಞೆಯ ಮೇರೆಗೆ, ಸೈನಿಕರು ಭಕ್ತ ಪ್ರಹ್ಲಾದನನ್ನು ಗುಡ್ಡದ ಮೇಲಿಂದ ಉರುಳಿಸಿದಾಗ, ಶ್ರೀಹರಿ ಆ ಬಾಲಕನನ್ನು ರಕ್ಷಿಸಿದ್ದನ್ನು ಕಥೆಯಲ್ಲಿ ಓದಿದ್ದೆ, 'ಭಕ್ತ ಪ್ರಹ್ಲಾದ' ಸಿನಿಮಾದಲ್ಲಿ ನೋಡಿದ್ದೆ. ಆ ಕತೆ ಅತ್ತೆಗೂ ನೆನಪಿಗೆ ಬಂದು ಇಲ್ಲಿ ಯಾವ ದೇವತೆ ಪವಾಡ ನಡೆಯಿತೆಂಬುದನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗದೆ ಕುಸಿದು ಬೀಳುತ್ತಾಳೆ. ಈ ವಿಶಿಷ್ಟ ದೃಶ್ಯ ನೋಡಿಯಾದರೂ ವೀಕ್ಷಕರು ಪವಾಡಗಳನ್ನು ನಂಬುವುದರಲ್ಲಿ ಸಂದೇಹವಿರದು.

–ಗೋಪಾಲ ಆಶ್ರಿತ, ಬೆಂಗಳೂರು

## ಮನೆಹಾಳು ಕಥೆಗಿಂತ ಇದೇ ವಾಸಿ

ಅನೇಕಾನೇಕ ಚಾನೆಲ್‌ಗಳ ಮಧ್ಯೆ 'ಸರಳ ಜೀವನ' ಹೊಸ ಕನ್ನಡ ಚಾನೆಲ್ ಮೊನ್ನೆಯಷ್ಟೆ 100 ದಿನಗಳ ಸಂಭ್ರಮ ಆಚರಿಸಿತು. 'ಆಚಾರ ವಿಚಾರ', 'ನಮ್ಮ ಆರೋಗ್ಯ ನಮ್ಮ ಕೈಯಲ್ಲಿ', 'ಪುಣ್ಯಕ್ಷೇತ್ರ', 'ಅಜ್ಜಿಯ ಕತೆಗಳು'.. ಹೀಗೆ ಅನೇಕ ಉತ್ತಮ ರೀತಿಯ ಕಾರ್ಯಕ್ರಮಗಳನ್ನು ನೀಡುತ್ತಿರುವುದು ಶ್ಲಾಘನೀಯ. ಆದರೆ ಈ ಚಾನೆಲ್ ಎಷ್ಟು ಕೇಬಲ್ ಆಪರೇಟರ್ಸ್ ಹಾಕ್ತಾರೆ, ಎಷ್ಟು ಜನರು ನೋಡಿ ನಿಜವಾದ ಸಂತಸ ನೆಮ್ಮದಿ ಕಾಣುತ್ತಿದ್ದಾರೆ ಎಂಬುದು ಚಿಂತನೀಯ. ಅನೇಕರ ಮನೆಯಲ್ಲಿ ಇಂತಹ ಉತ್ತಮ ಕಾರ್ಯಕ್ರಮಗಳನ್ನು ನೋಡದೆ, ಮನೆ, ಮನವನ್ನು ಹಾಳು ಮಾಡುವ ಧಾರಾವಾಹಿಗಳನ್ನೇ ನೋಡುತ್ತಿರುವುದು ವಿಷಾದನೀಯ.

ಡಾ. ಸಪ್ನ ಎಸ್., ಬೆಂಗಳೂರು

## ಚಂದದ ಹೆಸರು

'ಅಗ್ನಿ ಸಾಕ್ಷಿ'ಯ ಎಲ್ಲಾ ಪಾತ್ರಧಾರಿಗಳ ಹೆಸರು ತುಂಬಾ ಚೆನ್ನಾಗಿವೆ. ಗೌತಮ್, ಸಿದ್ಧಾರ್ಥ್, ಅಖಿಲ್, ಅಂಜಲಿ, ಚಂದ್ರಿಕಾ, ವಾಸುದೇವ ಮತ್ತು ಸನ್ನಿಧಿ ಇಷ್ಟೆಲ್ಲಾ ಒಳ್ಳೆಯ ಹೆಸರು ಜೋಡಿಸಿದವರಿಗೆ ಅಭಿನಂದನೆ.

ಎ.ಶಾರದಾ, ಕೊಟ್ಟೂರು

## ಹಿತಾಳಿಗೇಕೆ ಹೀನಬಟ್ಟೆ?

ಉದಯದಲ್ಲಿ ಪ್ರಸಾರವಾಗುವ ಅರಮನೆ ಧಾರಾವಾಹಿಯ ಖ್ಯಾತ ನಟ ಪ್ರಧಾನ್‌ರ ಪುತ್ರಿ ಹಿತಾ ಸಿರಿತನದ ಸುಪ್ಪತ್ತಿಗೆಯಲ್ಲಿ ಬೆಳೆದವಳು. ಆದರೆ ಅವಳ ಉಡುಪು ಮಾತ್ರ ದಿನೇ ದಿನೇ ಕನಿಷ್ಠಗೊಳ್ಳುತ್ತಾ ಬರುತ್ತಿರುವುದು ನೋಡುವವರಿಗೆ ಮುಜುಗರ ಹುಟ್ಟಿಸುವಂತಿದೆ. ಅಲ್ಲದೆ ಅವಳು ಕೆಲಸ ಮಾಡುತ್ತಾಳೆಂದು ಹೇಳಲಾಗುತ್ತಿರುವ ಕಚೇರಿಗೆ ಹೊರಡುವಾಗ ಅಂತಹುದೇ ಡ್ರೆಸ್. ಇದನ್ನು ನೋಡಿದಾಗ ಹಿತಾ ಇರುವುದು ಭಾರತದಲ್ಲೋ ಅಥವಾ ವಿದೇಶದಲ್ಲೋ ಎಂಬ ಸಂಶಯ ಮೂಡುತ್ತದೆ.

ಮೀರಾ ಮೋಹನ್, ಬೆಂಗಳೂರು